*

**ಓಎಸ್ ನಂಃ 40/2016**
**ಪಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 06-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ ವಾದಿ ಪರ ಶ್ರೀ.ಜಿ.ಆರ್.ವಿ. ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ಈ ಕೆಳಗಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.

SMG Contractors ಇವರು 1ನೇ ವಾದಿಗೆ ಮಾಹಿತಿ ಹಕ್ಕು ಅಡಿಯಲ್ಲಿ ನೀಡಿದ ವಿವರಣೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಸರ್ವೆ ನಂಬರ್ 539ನೇದ್ದರ ಕೈಬರಹದ ಪಹಣಿ ಪತ್ರಿಕೆಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ- 2 ಮತ್ತು 3 ಎಂದು (ನಿಪಿ-2 ರ ತರ್ಜುಮೆಯನ್ನು ಹಾಜರುಪಡಿಸುವ ಷರತ್ತಿಗೊಳಪಟ್ಟು), ಸರ್ವೆ ನಂಬರ್ 539/18 ನೇದ್ದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಸರ್ವೆ ನಂಬರ್ 538/18 ನೇದ್ದರ 2 ಕೈ ಬರಹದ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅದರ ತರ್ಜುಮೆಯನ್ನು ಹಾಜರುಪಡಿಸುವ ಷರತ್ತಿಗೊಳಪಟ್ಟು ಅವುಗಳನ್ನು ನಿಪಿ-5 ಮತ್ತು 6 ಎಂದು, ಸರ್ವೆ ನಂಬರ್ 538/18 ನೇದ್ದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.